

ಚಿತ್ರ: ಕೇಶವ ವಿಟ್ಲ



# ಹೊಸ ಹಾದಿಯಲ್ಲಿ ಭೂತ ಕೋಲ

**ಭೂತಕೋಲದ ಮುಖವರ್ಣಿಕೆ, ವೇಷ ಪರಿಕರಗಳೂ ಬದಲಾಗಿವೆ. ಯಕ್ಷಗಾನ ವೇಷಧಾರಿಯ ರೀತಿಯಲ್ಲೇ ವೈವಿಧ್ಯಮಯವಾದ ಪಾತ್ರಗಳು ಸೃಷ್ಟಿಯಾಗುತ್ತಿವೆ. ಶುದ್ಧ ತುಳು ಭಾಷೆಯನ್ನೇ ಆಡುತ್ತಿದ್ದ ದೈವಗಳ ನುಡಿಯಲ್ಲಿ ಇತ್ತೀಚೆಗೆ ಆಂಗ್ಲ ಪದಗಳೂ ಸೇರಿಕೊಳ್ಳುತ್ತಿವೆ.**

ಚಿತ್ರ–ಲೇಖನ: **ಪ.ರಾಮಕೃಷ್ಣ ಶಾಸ್ತ್ರಿ**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂತದ ಕೋಲ ಜನಪದ ಆರಾಧನಾ ಕಲೆ. ಪ್ರತಿಯೊಂದು ಮನೆಯಲ್ಲೂ ನಂಬಿಕೊಂಡ ಹತ್ತಾರು ದೈವಗಳಿಗೆ ಆರಾಧಿಸುವ ಭಿನ್ನ ಕ್ರಮವಿದೆ. ಕೊಡಗಿನ ಕೆಲವೆಡೆ, ಚಿಕ್ಕಮಗಳೂರು, ಉಡುಪಿ ತಾಲೂಕಿನ ಕುಂದಾಪುರದ ತನಕ ಮತ್ತು ಕಾಸರಗೋಡಿನ ವಿವಿಧೆಡೆಗಳಲ್ಲಿ ಬೇಸಿಗೆ ಕಾಲದುದ್ದಕ್ಕೂ ನಂಬಿದ ದೈವಗಳಿಗೆ ಕೋಲ, ನೇಮ ಮುಂತಾದ ಹೆಸರಿನಿಂದ ನಡೆಯುತ್ತಿರುವ ಆರಾಧನೆ ವಿಶಿಷ್ಟವಾದುದು. ಕೋಲದ ಪಾತ್ರಧಾರಿಯು ಮುಖವರ್ಣಿಕೆಯನ್ನು ಜನಪದ ಪದ್ಧತಿಗೆ ಅನುಸಾರವಾಗಿ ಸ್ಥಳೀಯ ಸಸ್ಯ ಮೂಲಗಳಾದ ತೆಂಗಿನ ಗರಿಯಂತಹ ಲಭ್ಯವಿರುವ ಸಾಮಗ್ರಿಗಳಿಂದಲೇ ವೇಷ ಭೂಷಣಗಳನ್ನು ತಯಾರಿಸಿಕೊಂಡು ಭೂತದ ಪ್ರತೀಕವಾದ ವೇಷ ಧರಿಸುತ್ತಾನೆ.

ಭೂತದ ಕೋಲವು ಎಂದು ಆರಂಭವಾಯಿತೋ ನಿಗದಿತವಾಗಿ ಹೇಳಲಾಗದಷ್ಟು ಅದು ಜನರ ಆರಾಧನೆಗಳ ಮಧ್ಯೆ ಬೆಸೆದು ಹೋಗಿದೆ. ದೇವಾಲಯಗಳಲ್ಲಿ ದೇವರ ಅರ್ಚನೆ ಮಾಡಲು ಮೇಲ್ಜಾತಿಯವರು ಮಾತ್ರ ಅರ್ಹರೆಂಬ ಪರಿಪಾಠ ಇರುವ ಕಾಲದಲ್ಲೇ ದಲಿತರ ಮೈಗೂ ದೇವರು ದೈವವಾಗಿ ಆವೇಶಗೊಂಡು ಮೇಲ್ಜಾತಿಯವರಿಗೂ ಪ್ರಸಾದ ಕೊಡಬಹುದೆಂಬುದನ್ನು ವಿಡಂಬನಾತ್ಮಕವಾಗಿ ತೋರಿಸಲೆಂದೇ ಈ ಕ್ರಮವನ್ನು ಬೆಳೆಸಿಕೊಂಡು ಬಂದಿರಬಹುದು. ದೇವರ ಸನಿಹಕ್ಕೂ ಸುಳಿಯಲಾಗದವರಿಗೆ ದೇವರ ಭಂಟರಾದ ದೈವಗಳು ಮನೆಯಂಗಳಕ್ಕೆ ಬಂದು ಕ್ಷೇಮ ಕುಶಲ ವಿಚಾರಿಸುವ ಈ ಪರಿ ಬೆಳೆದು ಬಂದುದರಲ್ಲಿ ಇತಿಹಾಸದ ಅನಿವಾರ್ಯತೆಯೂ ಹೌದು.

ಭೂತ ಕಟ್ಟುವವರು ಇಂದಿಗೂ ಅದೇ ದಲಿತ ವರ್ಗದವರು. ಇವರ ಸಾಧನೆ ಮಾತ್ರ ಅತ್ಯಪೂರ್ವವಾದುದು. ಪ್ರತಿಯೊಂದು ದೈವಕ್ಕೂ ಅದರದೇ ಸುದೀರ್ಘ ಕಥನವಿದ್ದು ಅದು ಹಾಡಿನಂತಿರುವ ಪಾಡ್ದನದ ರೂಪದಲ್ಲಿದೆ. ಎಲ್ಲ ದೈವಗಳ ಪಾತ್ರವನ್ನೂ ಧರಿಸಬಲ್ಲ ಇವರಿಗೆ ಬಹು ಚಿಕ್ಕ ವಯಸ್ಸಿನಲ್ಲೇ ಈ ಪಾಡ್ದನಗಳೆಲ್ಲವೂ ಮೌಖಿಕವಾಗಿ ಕಂಠಪಾಠವಾಗಿರುತ್ತದೆ. ಭೂತ ಕಟ್ಟಿರುವಾಗ ಅದನ್ನು ಅವರು ಸಲೀಸಾಗಿ ಹಾಡುವುದೇ ಅವರ ಸ್ಮರಣ ಶಕ್ತಿಯ ಅದ್ಭುತ.

ದೇವರಾಜ ಅರಸರು ಮುಖ್ಯಮಂತ್ರಿಯಾದ ಬಳಿಕ ಕರಾವಳಿಯಲ್ಲಿ ಸಂಭವಿಸಿದ ಮಹತ್ವದ ಬದಲಾವಣೆಯಲ್ಲಿ ಜಮೀನ್ದಾರಿಕೆಗೆ ಅಂತ್ಯ ಹಾಡಲಾಯಿತು. ಉಳುವವನೇ ಭೂ ಒಡೆಯನಾದ ಬಳಿಕ, ನಿಶ್ಚಿಂತೆಯಿಂದ ಗೇಣಿ ಒಕ್ಕಲುಗಳು ತಂದು ಕೊಡುತ್ತಿದ್ದ ಅಕ್ಕಿಯನ್ನು ಬಳಸಿ ಕಂಬಳ, ಭೂತದ ಕೋಲ ಇತ್ಯಾದಿಗಳನ್ನು ಮಾಡಿಸುತ್ತಿದ್ದ ಜಮೀನ್ದಾರರ ಶಕ್ತಿ ಉಡುಗಿಹೋಯಿತು. ಆ ಹಿನ್ನೆಲೆಯಲ್ಲೇ ಬಹಳಷ್ಟು ಭೂತ ಕೋಲಗಳು ನಿಂತುಹೋದವು. ಸಣ್ಣ ಭೂಮಿಗಳಿಗೆ ಒಡೆಯರಾದ ಉಳುಮೆದಾರರು ಅದನ್ನು ಚೈತನ್ಯಗೊಳಿಸಲು ಶಕ್ತರಾಗಲಿಲ್ಲ. ಬೇಸಗೆಯಲ್ಲಿ ಭೂತದ ಪಾತ್ರಧಾರಿಗಳಾಗಿ ದೈವ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಿದ್ದವರಿಗೂ ಆಗ ಸಿಗುವ ಪ್ರತಿಫಲವೆಂದರೆ ಅಂದಿನ ಸಂತರ್ಪಣೆಯ ಬಳಿಕ ಉಳಿದ ಅನ್ನ, ಒಂದಿಷ್ಟು ಅಕ್ಕಿ, ಬಿಡಿಗಾಸು ಹೊರತು ಇನ್ನೇನಿರಲಿಲ್ಲ. ಮಳೆಗಾಲದಲ್ಲಿ ಕಂಗಿನ ಹಾಳೆಯ ಮುಟ್ಟಾಳೆ ಕಟ್ಟಿ ಮಾರಾಟ ಮಾಡುವ ದುರ್ಬರ ಬದುಕು ಅವರದಾಯಿತು.